ಶ್ರೀ ಎ. ಮುನಿಯಪ್ಪ.—ಈ ರಸ್ತೆ ಅಂದಾಜಾಗಿ ಎಷ್ಟಾಗಿರುವುದೆಷ್ಟಕ್ಕೆ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ಲಕ್ಷ ಚಿಲ್ಲರೆ.

ಶ್ರೀ ಎ. ಮುನಿಯಪ್ಪ.—ಹಳೆಯ ಕಲ್ಲುಗಳನ್ನೂ ಉಪಯೋಗಿಸಿದೆ ಎಂದು ಹೇಳಿದೆ, ಎಷ್ಟು ದೂರದಿಂದ ಅದನ್ನು ತಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲೇ ಹತ್ತಿರದಲ್ಲಿ ನಿಂದಿಬೆಟ್ಟ ಇದೆ.

ಶ್ರೀ ಎ. ಮುನಿಯಪ್ಪ.—ಹೊಸಕಲ್ಲಿಗೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲೇ ನಮೂದು ಮಾಡಿದೆ.

ಶ್ರೀ ಎ. ಮುನಿಯಪ್ಪ.—ಹೊಸ ಕಲ್ಲುಗಳಿಗೆ ಲೀಡ್ ಎಷ್ಟು ಕೊಟ್ಟಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಲೀಡ್ ಸೇರಿ ಐದು ರೂಪಾಯಿ.

ಶ್ರೀ ಎ. ಮುನಿಯಪ್ಪ.—ಹೊಸ ಕಲ್ಲುಗಳು ಎಷ್ಟು ದೂರದಿಂದ ಬಂದಿವೆ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ದೂರದಿಂದ ಎನ್ನುವುದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಅಲ್ಲೇ ಬ್ಲಾಸ್ಟ್ ಮಾಡಿದ ಕಲ್ಲುಗಳಿಂದ ಕಟ್ಟಿ ಮೂರು ಮೈಲಿಯಿಂದ ತಂದಿದೆ ಎಂದು ಹೇಳಿ ಹಣ ದುರುಪಯೋಗವಾಗಿರುವುದನ್ನು ತಮ್ಮ ಗಮನಕ್ಕೆ ತಂದದ್ದು ಜ್ಞಾಪಕವಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ ಕೆಲವರು ತಂದಿದ್ದರು, ತನಿಖೆ ಮಾಡಿದ್ದೇನೆ. ಅದರಲ್ಲಿ ಅಷ್ಟು ರೋಪ ನಡೆದಿಲ್ಲವೆಂದು ಗೊತ್ತಾಯಿತು.

ಶ್ರೀ ಎ. ಮುನಿಯಪ್ಪ.—ಸ್ಥಳಕ್ಕೆ ಹೋಗಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹೋಗಿದ್ದೇನೆ.

ಶ್ರೀ ಎ. ಮುನಿಯಪ್ಪ.—ಪ್ಯಾರಾಪೆಟ್ ಸಿಮೆಂಟಿನಿಂದ ಕಟ್ಟಿದ್ದೊ ಅಥವಾ ಗಾರೆಯಿದೊ?

Sri Kadidal MANJAPPA.—I do not remember.

ಶ್ರೀ ಎ. ಮುನಿಯಪ್ಪ.—ಪ್ಯಾರಾಪೆಟ್ ಬದ್ದು ಹೋಗಿ, ಸರ್ಕಾರಿ ಬಸ್ಸುಗಳಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ನಾನು ಅಲ್ಲಗೆ ಹೋಗಿಲ್ಲ.

ಶ್ರೀ ಎ. ಮುನಿಯಪ್ಪ.—ಬಹಳ ಹಣ ಅನ್ಯಾಯವಾಗಿದೆ, ವಿಚಾರಣೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಕಷ್ಟ?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾದ ಆಧಾರ ಏದ್ದರೆ ವಿಚಾರಮಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಎ. ಮುನಿಯಪ್ಪ.—ಹಾಗಾದರೆ, ಆಗಿಲ್ಲವೆಂದು ಹೇಗೆ ಗೊತ್ತು?

ಶ್ರೀ ಕಡಿದಾಳ್ ಮಂಜಪ್ಪ.—ಸಂಬಂಧಪಟ್ಟ ಎಗ್ಸಿಕ್ಯೂಟಿವ್ ಇಂಜಿನಿಯರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರು ಹೇಳಿದ ವರದಿಯ ಆಧಾರದ ಮೇಲೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಈ ಪ್ರಶ್ನೆಗೆ ಉತ್ತರ ಒದಗಿಸಿದವರು ಯಾರು?

ಶ್ರೀ ಕಡಿದಾಳ್ ಮಂಜಪ್ಪ.—ಇಂಜಿನಿಯರಿಂಗ್ ಇಲಾಖೆಯವರು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಯಾರು ಹಣವನ್ನು ದುರುಪಯೋಗಪಡಿಸಿದ್ದಾರೋ ಅವರುತಾನೆ?

ಶ್ರೀ ಕಡಿದಾಳ್ ಮಂಜಪ್ಪ.—ಚೀಫ್ ಇಂಜಿನಿಯರಿಂದ ಬಂದಿರುವುದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಈ ಪ್ರಶ್ನೆಗೆ ಜವಾಬು ಕೊಡಿ ಎಂದು ಯಾವ ಅಸಿಸ್ಟೆಂಟ್ ಇಂಜಿನಿಯರಿಗೆ ಕಳುಹಿಸಿದ್ದೀರೋ ಅವರು ತಾನೆ ದುರುಪಯೋಗಪಡಿಸಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಗುಂಡೂರಾವ್ ಎಂಬವರು ಎಗ್ಸಿಕ್ಯೂಟಿವ್ ಇಂಜಿನಿಯರು, ಅವರು ಕಳುಹಿಸಿರುವುದು.

Mr. SPEAKER.—Whether that man has constructed the road does not arise out of this question.

Sri Kadidal MANJAPPA.—He is not the person who was in charge of that road.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಈಗ ಬಂದಿರುವವರು ಹೊಸಬರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಇದು ಹಳಬರ ಕಾಲದಲ್ಲಿ ನಡೆದ ಕೆಲಸವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಆ ಅಸಿಸ್ಟೆಂಟ್ ಇಂಜಿನಿಯರು ಎಷ್ಟು ದಿವಸದಿಂದಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಎರಡು ವರ್ಷದಿಂದ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರಿಗೆ ಐದು ನಲ ವರ್ಗವಾಗಿದ್ದೂ ಅಲ್ಲೇ ಇದ್ದಾರಲ್ಲವೇ?

Mr. SPEAKER.—That does not arise.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಆ ಅಸಿಸ್ಟೆಂಟ್ ಇಂಜಿನಿಯರು ರಸ್ತೆಗಳನ್ನೇ ತಿಂದುಹಾಕಿದ್ದಾರೆಂಬುದು ಗೊತ್ತಿದೆಯೆ? (ನಗು!)

ಅಧ್ಯಕ್ಷರು.—ರಸ್ತೆಯನ್ನು ಹೇಗೆ ತಿನ್ನುತ್ತಾರೆ?

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರ ಮೇಲೆ ತಾನೆ ಲಂಚನಿರೋಧ ಇಲಾಖೆಯವರು ತನಿಖೆ ನಡೆಸಿದ್ದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರು ಅಲ್ಲೇ ಇರಬೇಕೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇನೂ ಇಲ್ಲ; ಜಹಗೀರಿ ಹಾಕಿಲ್ಲ; ಬೇರೆಕಡೆ ವರ್ಗಮಾಡಬಹುದು.

Roads from Haranahalli to Javagal.

Q.—547. **Sri B. CHIKKANNA** (Javagal).—

Will the Government be pleased to state:—

(*a*) when the road from Haranahalli to Javagal in Arsikere Taluk was formed and its length in miles;

(*b*) whether this road is completely formed;

(*c*) the number of acres of land in each village acquired to form this road;

(*d*) for the lands so acquired, the names of persons to whom either compensation or lands in exchange was given, and the amount of compensation or the extent of land so given?

A.—Sri Kadidal MANJAPPA (Minister for Revenue and Public Works).—

(*a*) (i) In October 1950.
(ii) Thirteen.

(*b*) Almost completed.

(*c*) No land was acquired as the formation of the road had been done by the concerned villagers.

(*d*) Does not arise in view of reply to (*c*).

ಶ್ರೀ ಬಿ. ಚಿಕ್ಕಣ್ಣ.—ಬಹಳಮಟ್ಟಿಗೆ ಈ ರಸ್ತೆ ಪೂರ್ತಿಯಾಗಿದೆಯೆಂದು ಹೇಳಿದೆ, ಎಷ್ಟಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—13 ಮೈಲಿ ರಸ್ತೆ ನಿರ್ಮಾಣ ಮಾಡಿದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ಇದರಲ್ಲಿ ಎಂಟು ಮೈಲಿ ಆಗಿ ಇನ್ನೂ ಐದು ಮೈಲಿ ಆಗದೇಯಿರುವುದು ಗೊತ್ತಿದೆಯೇ;

ಶ್ರೀ ಕಡಿದಾಳ್ ಮಂಜಪ್ಪ.—ಕೊಂಚ ಉಳಿದಿದೆ.

ಶ್ರೀ ಬಿ. ಚಿಕ್ಕಣ್ಣ.—ಜಾಗ್ರತೆ ಈ ರಸ್ತೆಯನ್ನು ಪೂರ್ತಿ ಮಾಡಬೇಕೆಂದು ಮೂರು ವರ್ಷದಿಂದ ಜನರು ಕ್ಷೇಳಿಕೊಳ್ಳುತ್ತಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ಚಿಕ್ಕಣ್ಣ.—ಪೂರ್ತಿ ಮಾಡುವುದಕ್ಕೆ ಯಾವಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಮಾಡಬೇಕೆಂದು ಇಂಜನಿಯರಿಗೆ ಸೂಚನೆ ಕೊಟ್ಟಿದೆ.

ಶ್ರೀ ಬಿ. ಚಿಕ್ಕಣ್ಣ.—ಈ ರಸ್ತೆಯನ್ನು ಮಾಡುವಾಗ ಅನೇಕರ ಜಮೀನನ್ನು ತೆಗೆದುಕೊಂಡು ಮಾಡಿದೆ. ಅದಕ್ಕೆ ಬದಲು ಅವರಿಗೆ ಬೇರೆ ಜಮೀನು ಕೊಡಬೇಕೆಂದು ಸ್ಥಳೀಯ ಅಧಿಕಾರಿಗಳಿಂದ ಶಿಫಾರಸು ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಬಿ. ಚಿಕ್ಕಣ್ಣ.—ಏತಕ್ಕೆ ಇನ್ನೂ ಕೊಟ್ಟಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಅಕ್ಟಿಜಿಷನ್ ಪ್ರೊಸೀಡಿಂಗ್ಸ್ ಷುರು ಮಾಡಿದ್ದಾರೆ.

Loop Road from Gundlupet to Terakanambi (Repairs).

Q.—611. Sri H. K. SHIVARUDRAPPA (Gundlupet Heggadadevankote).—

Will the Government be pleased to state:—

(*a*) whether the Public Works Department have not suggested the repair of the loop road from Gundlupet to Terakanambi;

(*b*) if so, when the suggestion was made; the reason for not agreeing to this;

(*c*) whether it has not come to their notice that the non repair of this road has inconvenienced the movement of the public?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) In December 1954; the proposal is being examined.

(*c*) No.

Sri H. K. SHIVARUDRAPPA.—I have no supplementaries.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರಸ್ತೆಯನ್ನು ನಿರ್ಮಿಸಲು ಅಂದಾಜಾದದ್ದು ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳವರೆಗೆ ಖರ್ಚಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೂವರೆ ಲಕ್ಷಕ್ಕೆ ಅಂದಾಜು ಮಾಡುವಾಗ, ಈ ರಸ್ತೆಯನ್ನು ಯಾರು maintain ಮಾಡಬೇಕೆಂದು ನಿರ್ಧಾರಮಾಡಿಕೊಂಡು ಕಟ್ಟಿದರು?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ನನ್ನ ಲ್ಲಿಲ್ಲ, ಆ ರಸ್ತೆಯನ್ನು ಜಿಲ್ಲಾ ಬೋರ್ಡಿಗೆ ವರ್ಗ ಮಾಡಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೂವರೆ ಲಕ್ಷ ರೂಪಾಯಿ ಮಂಜೂರು ಮಾಡುವಾಗ ಈ ರಸ್ತೆಯನ್ನು ಯಾರು ನೋಡಿಕೊಳ್ಳಬೇಕೆಂದು ನಿರ್ಧಾರ ಮಾಡಿದಿರಿ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ನನ್ನ ಲ್ಲಿಲ್ಲ. ಇದು ಆದಂದು ಬಹಳ ಹಿಂದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಯಾರು ನೋಡಿಕೊಳ್ಳಬೇಕೆಂದು ನಿರ್ಧಾರವಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೂ ಸ್ಟೇಟ್ ಫಂಡ್ ರಸ್ತೆಯಾಗಿ ಮಾಡಬೇಕೆಂದು ನಿರ್ಧಾರ ಮಾಡಿದೆ.

Roads constructed in Nelamangala Taluk under Famine Relief Works.

Q.—636. Sri D. M. GOVINDARAJU (Nelamangala).—

Will the Government be pleased to state:—

(*a*) the names of roads constructed in Nelamangala Taluk under Famine Relief Works;

(*b*) of them, the roads that belong to the District Board?

A.—Sri Kadidal MANJAPPA (Minister for Revenue and Public Works).—

(*a*) (1) Yantaganahalli to Manchenhalli.